ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 19/11/20

# ಸಭಾಪತಿ ಪದಚ್ಯುತಿಗೆ ಬಿಜೆಪಿ ಸನ್ನಾಹ

## ಮೇಲ್ಮನೆಯಲ್ಲಿ ಹೆಚ್ಚಿದ ಬಲ

19/11/20

- ಚಳಿಗಾಲದ ಅಧಿವೇಶನದಲ್ಲೇ ಖೆಡ್ಡಾ
- ಪ್ರತಾಪ್‌ಚಂದ್ರಶೆಟ್ಟಿ ವಿರುದ್ಧ ಅವಿಶ್ವಾಸ
- ಜೆಡಿಎಸ್‌ನ ಬೆಂಬಲದೊಂದಿಗೆ ತಂತ್ರ

ಸಂ.ಕ.ಸಮಾಚಾರ ಬೆಂಗಳೂರು

ರಾಜ್ಯ ವಿಧಾನಪರಿಷತ್‌ನಲ್ಲಿ ಬಿಜೆಪಿ ಅತಿಹೆಚ್ಚು ಸಂಖ್ಯೆಯ ಸದಸ್ಯರನ್ನು ಹೊಂದಿದ ಬೆನ್ನಲ್ಲೇ ಬಹುದೊಡ್ಡ ತಂತ್ರಗಾರಿಕೆಗೆ ಮುಂದಾಗಿದೆ. ಹಾಲಿ ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ಚಳಿಗಾಲ ಅಧಿವೇಶನದಲ್ಲೇ ಅಸ್ತ್ರಸಾಣೆಗೆ ಸಿದ್ಧವಾಗಿದೆ.



ಮೇಲ್ಮನೆ ಸಭಾಪತಿ ಪ್ರತಾಪ್‌ಚಂದ್ರಶೆಟ್ಟಿ ಅವರನ್ನು ಕೆಳಗಿಸುವ ಖೆಡ್ಡಾ ರೆಡಿಯಾಗುತ್ತಿದೆ. ಶಿಕ್ಷಕ-ಪದವೀಧರ ಕ್ಷೇತ್ರಗಳ ಚುನಾವಣೆಯಲ್ಲಿ ನಾಲ್ಕೂ ಸ್ಥಾನ ಗೆದ್ದ ಆಡಳಿತಾರೂಢ ಬಿಜೆಪಿ ಪ್ರಸ್ತುತ ಪರಿಷತ್‌ನ ಒಟ್ಟು 75ರ ಪೈಕಿ 31 ಸದಸ್ಯ ಬಲದೊಂದಿಗೆ ಅತಿದೊಡ್ಡಪಕ್ಷವಾಗಿದೆ. ಈ ಹಿಂದೆ ಕಾಂಗ್ರೆಸ್(29)-ಜೆಡಿಎಸ್(14) ಹೊಂದಾಣಿಕೆ ಮಾಡಿಕೊಂಡು ಸಭಾಪತಿ ಕಾಂಗ್ರೆಸ್ ಹಾಗು ಉಪಸಭಾಪತಿ ಜೆಡಿಎಸ್‌ನ ಎಸ್.ಎಲ್ ಧರ್ಮೇಗೌಡ ಅವರ ಪಾಲಾಗಿತ್ತು.

ಇದೀಗ ರಾಜಕೀಯ ಸ್ಥಿತ್ಯಂತರ ಹಾಗು ಬಿಜೆಪಿ ಬಲವರ್ಧನೆ ಸಭಾಪತಿ ವಿರುದ್ಧ ಅವಿಶ್ವಾಸ ತರಲು ಕಾರಣವಾಗಿದೆ. ವಿಧಾನಸಭೆಯಲ್ಲಿ ಭೂಸುಧಾರಣಾ ಕಾಯ್ದೆಯಂತಹ ಮಹತ್ವದ ಮಸೂದೆಗಳು ಅಂಗೀಕಾರವಾದರೂ ಮೇಲ್ಮನೆಯಲ್ಲಿ ಒಪ್ಪಿಗೆ ಪಡೆಯದೆ ಸರ್ಕಾರ ಮುಖಭಂಗ ಅನುಭವಿಸಿತ್ತು. ಹಾಗಾಗಿ ಸಭಾಪತಿಯನ್ನೇ ಕೆಳಗಿಳಿಸಿ ತಮ್ಮ ಪಕ್ಷದವರನ್ನೇ ಕೂರಿಸಲು ಬಿಜೆಪಿ ಕಳೆದ ಅಧಿವೇಶನದ ವೇಳೆಯೇ ಕಾರ್ಯತಂತ್ರ ರೂಪಿಸಿತ್ತು.

ಸಚಿವಸಂಪುಟ ಪುನರ್‌ರಚನೆ ಕಸರತ್ತು ನಡೆದಲ್ಲಿ ಪ್ರಸ್ತುತ ಮೇಲ್ಮನೆ ಸಭಾನಾಯಕರಾಗಿರುವ ಸಚಿವ ಕೋಟ ಶ್ರೀನಿವಾಸಪೂಜಾರಿ ಅವರನ್ನೇ ಸಭಾಪತಿ ಸ್ಥಾನಕ್ಕೇರಿಸುವ ಪ್ರಸ್ತಾಪ ಪಕ್ಷದಲ್ಲಿ ವ್ಯಕ್ತವಾಗಿದೆ. ಮತ್ತೊಂದೆಡೆ ಹಿರಿಯ ಸದಸ್ಯ ಹೆಚ್.ವಿಶ್ವನಾಥ್ ಇಲ್ಲವೇ ಪುಟ್ಟಣ್ಣ ಅವರನ್ನು ಸಭಾಪತಿಯಾಗಿಸುವ ಪ್ರಯತ್ನವೂ ನಡೆದಿದೆ ಎನ್ನಲಾಗಿದೆ.

ಈ ತಂತ್ರಗಾರಿಕೆಗೆ ಜೆಡಿಎಸ್ ಕೂಡಾ ಕೈ ಜೋಡಿಸುವ ಸಾಧ್ಯತೆ ನಿಚ್ಚಳವಾಗಿದೆ. ಈ ಸಂಬಂಧ ಮಾತುಕತೆಯೂ ನಡೆದಿದೆ ಎನ್ನಲಾಗಿದೆ. ಹಾಗಾಗಿ ಜೆಡಿಎಸ್ ಉಪಸಭಾಪತಿ ಸ್ಥಾನ ಉಳಿಸಿಕೊಳ್ಳಲಿದೆ. ಚಳಿಗಾಲದ ಅಧಿವೇಶನದಲ್ಲಿಯೇ ಮೇಲ್ಮನೆಯಲ್ಲಿ ಮಹತ್ವದ ರಾಜಕೀಯ ವಿದ್ಯಮಾನ ಬಿಸಿಯೇರಿಸುವುದು ಖಚಿತವಾಗಿದೆ.